# ಮತ್ತೆ ಹಾರಿತು ಬೂದು ಬಕ!



ಪೊದೆಯೊಳಗೆ ಸಿಕ್ಕಿಕೊಂಡಿರುವ ಹಕ್ಕಿಯೊಂದು ಹಾರಲಾಗದೆ ಒದ್ದಾಡುತ್ತಿದೆ ಎಂದು ಪರಿಚಯಸ್ಥರೊಬ್ಬರು ಕರೆ ಮಾಡಿ ತಿಳಿಸಿದರು. ಸ್ಥಳಕ್ಕೆ ಭೇಟಿ ನೀಡಿದಾಗ ಅದು ವಲಸಿಗ ಬೂದು ಬಕ (Grey heron) ಎಂದು ಗೊತ್ತಾಯಿತು. ಅದರ ರೆಕ್ಕೆಗಳಿಗೆ ಅಸಂಖ್ಯಾತ ಅಂಟುಪುಳಿಗಳು ಬಲವಾಗಿ ಮೆತ್ತಿಕೊಂಡು ಹಾರಲು ಸಾಧ್ಯವಾಗದಂತೆ ಬಂಧಿಸಿದ್ದವು. ಹಿಂದಿನ ದಿನ ರಾತ್ರಿ ಗ್ರಾಮದಲ್ಲಿ ಯಾವುದೋ ಸಂಭ್ರಮಕ್ಕೆ ಅತಿಯಾಗಿ ಪಟಾಕಿಗಳನ್ನು ಸಿಡಿಸಲಾಗಿತ್ತು ಆ ಸದ್ದು ಪಕ್ಷಿಗಳನ್ನು ಕಂಗೆಡುವಂತೆ ಮಾಡಿದೆ. ಜೀವಭಯದಿಂದ ತತ್ತರಿಸಿ ಸುರಕ್ಷಿತ ಸ್ಥಳ ಅರಸಿ ಹೊರಟ ಈ ಪಕ್ಷಿ ಅಂಟುಪುಳಿಗಳು ಹೇರಳವಾಗಿರುವ ಪೊದೆಯನ್ನು ಹೊಕ್ಕು ಈ ತೆರನಾಗಿ ಬೆಳಗಿನವರೆಗೂ ಬಂಧಿಯಾಗಿದೆ.

ಪೊದೆಯಿಂದ ಅದನ್ನು ಹೊರತಂದು ಅದರ ರೆಕ್ಕೆಗಳಿಗೆ ಮೆತ್ತಿದ್ದ ಅಂಟುಪುಳಿಗಳನ್ನು, ರೆಕ್ಕೆಗಳಿಗೆ ಹಾನಿಯಾಗದಂತೆ ನಯವಾಗಿ ಬಿಡಿಸಿ ಅದನ್ನು ದೂರದಲ್ಲಿರುವ ತುಂಗಭದ್ರಾ ಹಿನ್ನೀರಿಗೆ ಕರೆದೊಯ್ದು ಬಿಟ್ಟೆ. ಕೆಲವು ನಿಮಿಷಗಳಲ್ಲಿ ಚೇತರಿಸಿಕೊಂಡ ಪಕ್ಷಿಯು ತನ್ನ ರೆಕ್ಕೆಗಳನ್ನು ಪಟಪಟನೆ ಬಡಿಯುತ್ತಾ ತುಸು ದೂರ ಹಾರಿ ಬೇರೊಂದು ದಡದಲ್ಲಿ ಕೂತು ನಿಶ್ಚಿಂತೆಯಿಂದ ಆಹಾರಾನ್ವೇಷಣೆಯಲ್ಲಿ ತೊಡಗಿತು. ಅದು ಯಾವುದೇ ತೊಡಕಿಲ್ಲದಂತೆ ಹಾರಿದ್ದನ್ನು ಕಂಡು ಅತೀವ ಸಂತಸವಾಯಿತು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ



# ನೈಸರ್ಗಿಕ ಗ್ರೀಟಿಂಗ್ಸ್

ಮನೆಯ ಹಿತ್ತಲು, ತೋಟದಂಚಿನಲ್ಲಿ ಬೆಳೆದ ವಿವಿಧ ಜಾತಿಯ ಕಳೆ ಸಸ್ಯಗಳನ್ನು ಬಳಸಿಕೊಂಡು ಅತ್ಯಾಕರ್ಷಕ 'ಗ್ರೀಟಿಂಗ್ಸ್' ಅಥವಾ ಶುಭಾಶಯ ಚಿತ್ರ ಪತ್ರಗಳನ್ನು ಮಾಡಿ ಆನಂದಿಸಬಹುದು.

ಪೇಟೆಯಲ್ಲಿ ಹಣಕೊಟ್ಟು ತರುವ ಪತ್ರಗಳಿಗಿಂತ ಇವು ಹೆಚ್ಚು ಸುಂದರವೂ, ನೈಸರ್ಗಿಕವೂ ಆಗಿವೆ. ಇದನ್ನು ಕರಕುಶಲ ಹವ್ಯಾಸವಾಗಿ ಮಾಡುತ್ತ ಸಮಯದ ಸದುಪಯೋಗ ಮಾಡಬಹುದಾಗಿದೆ.

ಸಂಕ್ರಾಂತಿ, ಹೊಸವರ್ಷ, ಹುಟ್ಟುಹಬ್ಬ ಇತ್ಯಾದಿ ಸಂದರ್ಭಗಳಲ್ಲಿ ಚಿತ್ರದ ಪತ್ರಗಳನ್ನು ಕೊಟ್ಟು ಶುಭಾಶಯ ಹೇಳುವುದು ರೂಢಿ. ಸಾಧ್ಯವಾದಷ್ಟು ನೈಸರ್ಗಿಕ ವಸ್ತುಗಳನ್ನೇ ಬಳಸಿ, ನಾವೇ ಅಂತಹ ಪತ್ರಗಳನ್ನು ಸುಲಭದಲ್ಲಿ ಮಾಡಿಕೊಡುವ ಪದ್ಧತಿ ನಮ್ಮದಾಗಲಿ.

—ಅರ್ಚನಾ ಬೊಮ್ನಳ್ಳಿ, ಶಿರಸಿ

# ನೀರ್ಗನ್ನಡಿ

ದಾವಣಗೆರೆಯಿಂದ ಜಗಳೂರಿನ ದಾರಿಯಲ್ಲಿ 4 ಕಿ.ಮೀ ಸಾಗಿದರೆ ಆನೆಕೊಂಡ ಎಂಬ ಗ್ರಾಮ ಸಿಗುತ್ತದೆ. ಅಲ್ಲೊಂದು ಐತಿಹಾಸಿಕ ಕಲ್ಯಾಣಿಯಿದೆ. ಚಿತ್ರದುರ್ಗದ ಪಾಳೆಗಾರರ ಮನೆತನಕ್ಕೆ ಸೇರಿದ್ದೆಂದು ಹೇಳಲಾಗುತ್ತದೆ.

ಅಲ್ಲಿ ಕುದುರೆಗಳನ್ನು ಕಟ್ಟಲು ರಚಿಸಲಾದ ಗೂಡುಗಳಂತಹ ರಚನೆಗಳಿವೆ. ಅದನ್ನು ದಾಟಿ ಮುಂದೆ ಸಾಗಿದರೆ ಕಾಣುವುದೇ ಸುಂದರವಾದ ಕಲ್ಯಾಣಿ. ರಾಣಿಯರು ತಮ್ಮ ಸೌಂದರ್ಯವನ್ನು ನೋಡಿಕೊಳ್ಳಲೆಂದೇ ಮಾಡಿಟ್ಟ ಕನ್ನಡಿಯಂತಹ ರಚನೆ. ಪ್ರತಿಬಿಂಬ ಕಾಣುವಂತೆ ತಿಳಿಯಾದ ನೀರು. ಸುತ್ತಲೂ ಮೆಟ್ಟಿಲುಗಳು. ಈ ಹೋಲ್ ನಂತಹ ಆಕೃತಿ. ಸುತ್ತಲೂ ದುಂಡಗಿದ್ದು ಒಂದು ಕಡೆ ಚಾಚಿಕೊಂಡಿರುವ ಇದರ ಮೆಟ್ಟಿಲುಗಳಲ್ಲಿ ಇಳಿದು ಕುಳಿತಾಗ ಇತಿಹಾಸದ ಪುಟಗಳು ತೆರೆದುಕೊಂಡಂತಹ ಅನುಭವ ಆಗುತ್ತದೆ.

—ಸುಬ್ಬಲಕ್ಷ್ಮಿ ಹೆಚ್.ಕೆ. ಕೋಲಾರ

